# 3 Year LL.B. First Semester Examination, December 2018
## (2018 Batch)
## LAW OF TORTS

Duration : 3 Hours | Max. Marks : 80

**Instructions** : 1. Answer **all five** Units.

2. **One** essay type question and **one** short note/ problem is **compulsory** from **each** Unit.
3. Figures to the **right** indicate marks.
4. Answer should be written **either** in **English** or in **Kannada completely**.

UNIT – I

Q. No. 1. a) Explain 'damnum sine injuria' and 'injuria sine damno' with decided cases. Marks : 10

ನಿರ್ಧರಿತ ಪ್ರಕರಣಗಳೊಂದಿಗೆ 'ಹಾನಿಯಿಲ್ಲದ ನಷ್ಟ' ಮತ್ತು ನಷ್ಟವಿಲ್ಲದ ಹಾನಿ'ಯನ್ನು ವಿವರಿಸಿರಿ.

OR

a) Discuss the importance of mental elements in tortious liability. Marks : 10

ಅಪಕೃತ್ಯದ ಹೊಣೆಗಾರಿಕೆಯಲ್ಲಿ ಮಾನಸಿಕ ಅಂಶಗಳ ಪ್ರಾಮುಖ್ಯತೆಯನ್ನು ಚರ್ಚಿಸಿರಿ.

b) John walks across Jack's field without his permission causing no damage. Has he committed any wrongful act ? Decide. Marks : 6

ಜಾನ್‌ನು ಜಾಕ್‌ನ ಪರವಾನಿಗೆ ಇಲ್ಲದೆ, ಯಾವುದೇ ನಷ್ಟವನ್ನುಂಟು ಮಾಡದೆ, ಜಾಕ್‌ನ ಹೊಲದಲ್ಲಿ ಹಾಯ್ದು ಹೋಗುತ್ತಾನೆ. ಜಾನ್‌ನು ಯಾವುದೇ ಅಕ್ರಮಕಾರಕ ಕೃತ್ಯ ಎಸಗಿದ್ದಾನೆಯೇ ? ನಿರ್ಧರಿಸಿರಿ.

OR

b) 'X' dug a well in his land for use of his farm, as a result of which water from the well of 'Y', his neighbour, dried away. Can Y sue X ? Decide. Marks : 6

'X' ನು ತನ್ನ ಜಮೀನಿನಲ್ಲಿ, ಜಮೀನಿನ ಉಪಯೋಗಕ್ಕಾಗಿ ಒಂದು ಬಾವಿಯನ್ನು ತೋಡುತ್ತಾನೆ. ಪರಿಣಾಮವಾಗಿ, ಅವನ ನೆರೆಯವನಾದ 'Y'ನ ಬಾವಿಯ ನೀರು ಒಣಗಿ ಹೋಯಿತು. 'Y'ನು 'X' ನ ವಿರುದ್ಧ ದಾವೆ ಹೂಡಬಹುದೇ ? ನಿರ್ಧರಿಸಿರಿ.

## UNIT – II

Q. No. 2. a) Discuss the liability of master for the wrongful acts of his servant. Marks : 10

ತನ್ನ ಸೇವಕನ ಅಕ್ರಮಕಾರಕ ಕೃತ್ಯಗಳಿಗೆ ಮಾಲಿಕನ ಹೊಣೆಗಾರಿಕೆಯನ್ನು ಚರ್ಚಿಸಿರಿ.

OR

a) Explain 'inevitable accident' and 'private defence' as defences to tortious liability. Marks : 10

ಅಪಕೃತ್ಯದ ಹೊಣೆಗಾರಿಕೆಗೆ ಪ್ರತಿ ರಕ್ಷೆಯಾಗಿ 'ಅನಿವಾರ್ಯ ಅಪಘಾತ' ಮತ್ತು 'ಖಾಸಗಿ ರಕ್ಷಣೆ'ಯನ್ನು ವಿವರಿಸಿರಿ.

b) The plaintiff sent her fur coat to defendant for dry-cleaning. The defendant assigned this work to his servant. The servant stole the coat. Decide the liability of the defendant. Marks : 6

ವಾದಿಯು ತನ್ನ ಫರ್ ಕೋಟನ್ನು ಸ್ವಚ್ಛಗೊಳಿಸುವುದಕ್ಕಾಗಿ ಪ್ರತಿವಾದಿಗೆ ಕಳುಹಿಸಿದನು. ಪ್ರತಿವಾದಿಯು ಅದನ್ನು ತನ್ನ ಸೇವಕನಿಗೆ ವಹಿಸಿಕೊಟ್ಟನು. ಸೇವಕನು ಕೋಟನ್ನು ಕಳವು ಮಾಡಿದನು. ಪ್ರತಿವಾದಿಯ ಹೊಣೆಗಾರಿಕೆಯನ್ನು ತೀರ್ಮಾನಿಸಿರಿ.

OR

b) Due to heavy rainfall the wall of defendants house collapsed resulting in death of plaintiff's child. In an action for damages, the defendant pleaded the defence of act of God. Can he succeed ? Decide. Marks : 6

ಅತಿಯಾದ ಮಳೆಯು ಸುರಿದಿದ್ದರಿಂದ ಪ್ರತಿವಾದಿಯ ಮನೆಯ ಗೋಡೆ ಕುಸಿದ ಪರಿಣಾಮವಾಗಿ ವಾದಿಯ ಮಗುವು ಮರಣ ಹೊಂದಿತು. ಪರಿಹಾರ ಕೋರಿ ವಾದಿಯು ಹೂಡಿದ ದಾವೆಯಲ್ಲಿ ಪ್ರತಿವಾದಿಯು ದೈವೀಕೃತ್ಯದ ಪ್ರತಿರಕ್ಷೆಯನ್ನು ವಾದಿಸುತ್ತಾನೆ. ಅವನು ಗೆಲ್ಲಬಹುದೇ ? ನಿರ್ಧರಿಸಿರಿ.

## UNIT – III

Q. No. 3. a) Discuss the principle of remoteness of damages. Marks : 10

ದೂರದ ನಷ್ಟ ತತ್ವವನ್ನು ಚರ್ಚಿಸಿರಿ.

OR

a) Explain the rule in Rylands V. Fletcher. Marks : 10

ರೈಲ್ಯಾಂಡ್ಸ್ ವಿ. ಫ್ಲೆಚರ್ ಪ್ರಕರಣದಲ್ಲಿಯ ನಿಯಮವನ್ನು ವಿವರಿಸಿರಿ.

b) 'A' parked his car on a street with his dog inside. As 'B' was walking pass the car, the dog which had been jumping inside smashed the glass panel and as a result a splinter hit B's eye and caused injury. Is A liable to pay damages to B ? Decide. Marks : 6

'A' ನು ತನ್ನ ಕಾರನ್ನು ಒಳಗಿದ್ದ ನಾಯಿಯ ಸಮೇತ ರಸ್ತೆಯ ಪಕ್ಕ ನಿಲ್ಲಿಸುತ್ತಾನೆ. 'B'ಯು ಆ ಕಾರಿನ ಬಳಿ ನಡೆದು ಹೋಗುತ್ತಿರುವಾಗ, ಆ ನಾಯಿಯು ಕಾರಿನ ಗಾಜನ್ನು ಒಡೆದು ಹಾಕುತ್ತದೆ. ಅದರಿಂದ ಸಿಡಿದ ಗಾಜಿನ ಚೂರೊಂದು 'B' ಯ ಕಣ್ಣಿಗೆ ಬಡಿದು ಗಾಯ ಉಂಟು ಮಾಡುತ್ತದೆ. 'A' ನು 'B' ಗೆ ಪರಿಹಾರ ಕೊಡಲು ಹೊಣೆಗಾರನಾಗುತ್ತಾನೆಯೇ ? ನಿರ್ಧರಿಸಿರಿ.

OR

b) 'M' employed 'C' an independent contractor to repair a lamp overhanging the front doorway. As it was not properly fastened, the lamp fell on 'P' a passerby. 'P' sustained injuries. Can 'P' claim damages from M ? Decide. Marks : 6

ಮುಂಬಾಗಿಲಿನ ಮುಂದಿನ ದಾರಿಯಲ್ಲಿ ನೇತಾಡುತ್ತಿದ್ದ ದೀಪವನ್ನು ದುರಸ್ತಿ ಮಾಡಲು 'M' ನು 'C' ಎಂಬ ಸ್ವತಂತ್ರ ಗುತ್ತಿಗೆದಾರನನ್ನು ನೇಮಕ ಮಾಡಿದನು. ಆ ದೀಪವನ್ನು ಸರಿಯಾಗಿ ಬಿಗಿಯದೇ ಇದ್ದುದರಿಂದ ಅದು 'P' ಎಂಬ ದಾರಿಹೋಕನ ಮೇಲೆ ಬಿದ್ದು, 'P' ಯು ಗಾಯಗೊಂಡನು. 'P' ಯು 'M' ನ ವಿರುದ್ಧ ನಷ್ಟ ಪರಿಹಾರಕ್ಕಾಗಿ ದಾವೆ ಹೂಡಬಹುದೇ ? ನಿರ್ಧರಿಸಿರಿ.

## UNIT – IV

Q. No. 4. a) Define defamation. Distinguish between libel and slander. Marks : 10

ಮಾನಹಾನಿಯನ್ನು ವ್ಯಾಖ್ಯಾನಿಸಿರಿ. ಲಿಖಿತ ಮಾನಹಾನಿ ಮತ್ತು ಮೌಖಿಕ ಮಾನಹಾನಿಯ ನಡುವಿನ ವ್ಯತ್ಯಾಸ ಹೇಳಿರಿ.

OR

a) Explain the tort of conversion. Marks : 10

'ರೂಪಾಂತರ' ಅಪಕೃತ್ಯವನ್ನು ವಿವರಿಸಿರಿ.

b) In order to protect his crop from trespassing pigs 'X' laid traps on his land. Y's cow strayed into that land and fell into the trap and was killed. Can 'X' be held liable to pay damages ? Decide. Marks : 6

ಹಂದಿಗಳ ಆಕ್ರಮಣದಿಂದ ತನ್ನ ಬೆಳೆಯನ್ನು ರಕ್ಷಿಸಲು 'X' ನು ತನ್ನ ಹೊಲದಲ್ಲಿ ಬಲೆ ಹಾಕಿದ್ದನು. 'Y' ನ ಆಕಳು ಆ ಹೊಲದಲ್ಲಿ ನುಗ್ಗಿ, ಬಲೆಯಲ್ಲಿ ಬಿದ್ದು ಸತ್ತಿತು. 'X' ನು ನಷ್ಟ ಪರಿಹಾರ ನೀಡಲು ಬಾಧ್ಯನೇ ? ನಿರ್ಧರಿಸಿರಿ.

OR

b) Some persons combine and go to the theatre and boo and hoat out an actor. What is their liability ? Decide. Marks : 6

ಕೆಲವು ವ್ಯಕ್ತಿಗಳು ಕೂಡಿಕೊಂಡು ಒಂದು ನಾಟಕ ಗೃಹಕ್ಕೆ ಹೋಗುತ್ತಾರೆ ಮತ್ತು ಒಬ್ಬ ಕಲಾವಿದನ ವಿರುದ್ಧ ಕಿರುಚಾಡಿ ಗದ್ದಲ ಎಬ್ಬಿಸುತ್ತಾರೆ. ಅವರ ಹೊಣೆಗಾರಿಕೆಯೇನು ? ನಿರ್ಧರಿಸಿರಿ.

## UNIT – V

Q. No. 5. a) Explain the composition, powers and functions of State Commission under the Consumer Protection Act. Marks : 10

ಗ್ರಾಹಕ ರಕ್ಷಣಾ ಅಧಿನಿಯಮದಡಿ ರಾಜ್ಯ ಆಯೋಗದ ರಚನೆ, ಅಧಿಕಾರ ಹಾಗೂ ಕಾರ್ಯಗಳನ್ನು ವಿವರಿಸಿರಿ.

OR

a) Explain the salient features of Motor Vehicles Act. Marks : 10

ಮೋಟಾರು ವಾಹನ ಅಧಿನಿಯಮದ ವಿಶಿಷ್ಟ ಲಕ್ಷಣಗಳನ್ನು ವಿವರಿಸಿರಿ.

b) A Surgeon in hospital 'X' conducted an eye operation on Mr., 'P' negligently, as a result 'P' lost his eye sight partially. P wants to claim 15 lakhs as compensation before the consumer forum. Advice him. Marks : 6

'X' ಆಸ್ಪತ್ರೆಯಲ್ಲಿ ಒಬ್ಬ ಶಸ್ತ್ರಚಿಕಿತ್ಸಕನು 'P'ಯ ಕಣ್ಣಿನ ಶಸ್ತ್ರಚಿಕಿತ್ಸೆಯನ್ನು ನಿರ್ಲಕ್ಷತೆಯಿಂದ ಮಾಡಿದ ಪರಿಣಾಮ Pಯು ದೃಷ್ಟಿಯನ್ನು ಭಾಗಶಃ ಕಳೆದುಕೊಂಡನು. Pಯು ಗ್ರಾಹಕ ವೇದಿಕೆಯಲ್ಲಿ 15 ಲಕ್ಷ ರೂಪಾಯಿ ಪರಿಹಾರ ಕೋರ ಬಯಸುತ್ತಾನೆ. ಅವನಿಗೆ ಸಲಹೆ ನೀಡಿರಿ.

OR

b) Write short note on "insurance against third party risks". Marks : 6

''ಮೂರನೆಯ ಪಕ್ಷದ ಅಪಾಯಗಳ ವಿರುದ್ಧ ವಿಮೆಯ ಕುರಿತು ಲಘು ಟಿಪ್ಪಣಿ ಬರೆಯಿರಿ.

---